# ನವಿಲುಗನ್ನಡಿ




ಫೆಬ್ರುವರಿ ಸಂಚಿಕೆ ತುಂಬಾ ಇಷ್ಟವಾಯಿತು. ಸುಂದರ ಮುಖಪುಟ, ಒಳಗೆ ಒಂದಕ್ಕಿಂತ ಒಂದು ಚಂದದ ಕಥೆಗಳು ಗಮನ ಸೆಳೆದವು. ಈಶ್ವರಚಂದ್ರ ಅವರ 'ನನ್ನ ಕಥಾಪ್ರಸಂಗ' ಬಹಳ ಮೆಚ್ಚುಗೆಯಾಯಿತು.

**ನೀಲಮ್ಮ ಕುಮಾರಪ್ಪ, ರಾಯಚೂರು**

ಚೈತ್ರಾ ಕೋಟೂರ್ ಅವರ ಕಥೆ 'ರಾಧಾ 2016' ಚೆನ್ನಾಗಿದೆ. ಎಂ.ಆರ್. ಮಂದಾರವಲ್ಲಿ ಅವರ ಕಥೆ 'ಕಾಮನಬಿಲ್ಲು' ಸಮಾಜಕ್ಕೆ ಹಿಡಿದ ಕೈಗನ್ನಡಿಯಾಗಿದೆ.

**ಎಸ್. ಸುಂದರ್, ಹಾಸನ**

ಮೀನಾ ಕಾಕೋಡ್ಕರ್ ಅವರ 'ಸಂಜೆ', ಕೃಷ್ಣ ಮಾಸಡಿ ಅವರ 'ಗ್ಯಾನಿ ಮತ್ತು ಗುಲಾಬಿ' ಕಥೆಗಳನ್ನು ಓದಿ ಮುಗಿಸಿದ್ದೇ ಗೊತ್ತಾಗಲಿಲ್ಲ.

**ಶಾರದಾ ಹಂದೆ, ಬೆಂಗಳೂರು**

ಎಸ್.ಪಿ. ಶ್ಯಾನಭಾಗ ಅವರ 'ಹಿರಿಯಣ್ಣನ ಹೈವೇ' ಕತೆ ಓದಿ 'ಪಾಪ' ಅನಿಸಿತು. ಕಲಿಂ ಉಲ್ಲಾ ಅವರ ಪ್ರಬಂಧ 'ಮಾವನ ಆತಿಥ್ಯ' ಎಂತಹವರನ್ನೂ ನಗಿಸುತ್ತದೆ.

**ಸುಕುಮಾರ್ ಕೆ.ಎ., ತುಮಕೂರು**

'ಕಥನ ಕಾರಣ' ಅಂಕಣದ 'ವಿವೇಕವೇ ವರ' ಅರ್ಥಪೂರ್ಣ. ಮಹಾಭಾರತದಲ್ಲಿರುವ ಈ ಸಣ್ಣ ಕಥೆಯ ಅರ್ಥವಿಸ್ತಾರ ದೊಡ್ಡದು.

**ನಾರಾಯಣ ಯಾಜಿ, ಶಿರಾಲಿ**

ಹ್ವಾನ್ ರುಲ್ಫೋನ 'ಲುವೀನಾ' ಕಥೆಯನ್ನು ಓದಿ ಸುಸ್ತಾಯಿತು. ವೆಂಪಲ್ಲಿ ಶರೀಫ್‌ರ 'ಅಮ್ಮನ ಚಿತ್ರ' ಓದಿದ ಬಳಿಕ ಕಳೆದುಹೋದ ಸಂತೋಷ ಮತ್ತೆ ಸಿಕ್ಕಿತು!

**ಮೋಹನ ರು. ಹಣಗಿ, ಅಮೀನಗಡ**

'ನನ್ನ ಕಥಾಪ್ರಸಂಗ'ದಲ್ಲಿನ ಈಶ್ವರಚಂದ್ರ ಅವರ 'ಗಣಿಯಾಳದಲ್ಲಿ ಮಿನುಗುವ ಚಿನ್ನದ ಗೆರೆ' ಲೇಖನ ಅನೇಕ ಒಳನೋಟಗಳಿಂದ ಕೂಡಿದೆ. ರಾಮಚಂದ್ರ ಭಾವೆ ಅವರ 'ರಾಜ್ಯ–ಕಾರಣ' ಕಥೆ ವಿಶೇಷವಾಗಿ ಮನಸೆಳೆಯಿತು.

**ಎನ್. ಮಹಾದೇವ, ಚೆನ್ನೈ**

ಈಗಿನ ಹಾಸ್ಯ ಬರಹಗಳು ಓದುವಂತೆಯೇ ಇರುವುದಿಲ್ಲ. ಓದಿದರೆ ನಗು ಕೂಡ ಬರುವುದಿಲ್ಲ. ಆದರೆ, ಕಲೀಮ್ ಉಲ್ಲಾ ಅವರ 'ಮಾವನ ಆತಿಥ್ಯ' ಓದಿ ಬಿದ್ದು ಬಿದ್ದು ನಕ್ಕಿದ್ದೇನೆ. ಬಸ್ ಪ್ರಯಾಣಿಕರು ನನ್ನನ್ನೇ ನೋಡುತ್ತಿರುವ ಅರಿವಿದ್ದೂ ನಗು ತಡೆಯುವ ವ್ಯರ್ಥ ಪ್ರಯತ್ನ ಮಾಡಿ ಮತ್ತೂ ಜೋರಾಗಿ ನಕ್ಕಿದ್ದೇನೆ.

**ಕೆ.ಎ. ಸೌಮ್ಯ, ಮೈಸೂರು**

ಓದುಗರ ಸಂವೇದನೆಯನ್ನು ಮಿಡಿವ ಕಥೆಗಳು ಫೆಬ್ರುವರಿ 'ಮಯೂರ'ದ ಜೀವಾಳವಾಗಿವೆ. 'ನನ್ನ ಕಥಾಪ್ರಸಂಗ' ಮಾಲಿಕೆ ಪತ್ರಿಕೆಗೆ ಉತ್ತಮ ಸೇರ್ಪಡೆ. 'ಕಥನ ಕಾರಣ' ಮಾಲಿಕೆಯ ಪ್ರತಿ ಕಂತು ಹೃದಯಾಂತರಾಳದಲ್ಲಿ ವಿಚಾರಗಳ ಬೆಳಕನ್ನು ಹಾಯಿಸುತ್ತದೆ.

**ಎಂ.ಎಸ್. ರಮೇಶ್, ಪುತ್ತೂರು**